ದಿನಾಂಕಃ 16.05.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:ಎದುರುದಾರರ ಪರ ಶ್ರೀ ಎ.ಎಸ್.ಕೆ. ವಕೀಲರಿಂದ:**

ನಾನು ಹಾಲೀ ಯಾವುದೇ ಉದ್ಯೋಗ ಮಾಡುತ್ತಿಲ್ಲ. ಚಿಕ್ಕಮಗಳೂರಿನ ಒಕ್ಕಲಿಗರ ಸಮುಧಾಯ ಭವನದ ಬಳಿಯಲ್ಲಿ ನನ್ನದೇ ಒಂದು ಫ್ಯಾಶನ್ ಡಿಸೈನ್ ಮತ್ತು ರೆಡಿಮೇಡ್ ಬಟ್ಟೆ ಅಂಗಡಿ ಇದೆ ಎಂದರೆ ಸರಿಯಲ್ಲ. ಆ ಅಂಗಡಿಯಲ್ಲಿ ನಾನು ಬಟ್ಟೆ ಸ್ಟಿಚ್ ಮಾಡಲು ಕಳೆದ 1 ವರ್ಷದಿಂದ ಹೋಗುತ್ತಿದ್ದೇನೆ. ಸಾಕ್ಷಿಯು ಮುಂದುವರೆದು ಈಗ 2 ತಿಂಗಳಿಂದ ಆ ಕೆಲಸಕ್ಕೆ ಹೋಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಹೆಸರು ಕ್ಲಾಸಿಕ್ ಟೈಲರಿಂಗ್ ಸೆಂಟರ್. ಅಲ್ಲಿ ಇಬ್ಬರು ವ್ಯಕ್ತಿಗಳು ಕೆಲಸ ಮಾಡುತ್ತಾರೆ. ಆ ಅಂಗಡಿಯಲ್ಲಿ ರೆಡಿಮೇಡ್ ಬಟ್ಟೆಗಳನ್ನು ಸಹಾ ಮಾರಾಟ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗ ಮಾಡುತ್ತಿರಲಿಲ್ಲ ಆದರೆ ಈಗ ಮಾಡುತ್ತಿರಬಹುದು ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಮಾಲೀಕರ ಹೆಸರು ಸತೀಶ್. ನಾನು ಈಗ ಚಿಕ್ಕಮಗಳೂರಿನ ಅರವಿಂದ ನಗರದ ಬಸವನಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ. ನಾನು ವಾಸವಿರುವ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ಮಾಸಿಕ ರೂ.8,000/- ಬಾಡಿಗೆ ಪಾವತಿಸುತ್ತಿದ್ದೇನೆ.

ನನ್ನ ತಾಯಿಯ ಮನೆಯಲ್ಲಿ ನನ್ನ ತಮ್ಮನ ಪತ್ನಿಯ ನಡುವೆ ತೊಂದರೆಯಾಗಿದ್ದು ಆಗಾಗಿ ನಾನು ಬಾಡಿಗೆ ಮನೆ ಮಾಡಿದ್ದೇನೆ. ನಾನು ಮಾಡಿಕೊಂಡಿರುವ ಬಾಡಿಗೆ ಮನೆಯಲ್ಲಿ ನನ್ನೊಂದಿಗೆ ನನ್ನ ತಾಯಿ ವಾಸವಿದ್ದಾರೆ. ನಾನು ಚಿಕ್ಕಮಗಳೂರಿನಲ್ಲಿ ಫ್ಯಾಶನ್ ಡಿಸೈನ್ ಮತ್ತು ರೆಡಿಮೇಡ್ ಬಟ್ಟೆ ಅಂಗಡಿ ವ್ಯವಹಾರ ಮಾಡುತ್ತಿರುವ ಕಾರಣಕ್ಕಾಗಿ ಬಾಡಿಗೆ ಮನೆ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿಯು ನಾನು ಮನೆಯಲ್ಲಿಯೇ ಸ್ಟಿಚ್ಚಿಂಗ್ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ವ್ಯವಹಾರದಿಂದ ತಿಂಗಳಿಗೆ ರೂ.30,000/- ರಿಂದ ರೂ.40,000/- ಆದಾಯ ಇದೆ ಎಂದರೆ ಸರಿಯಲ್ಲ. ನಾನು ಎದುರುದಾರರನ್ನು ಮದುವೆಯಾಗುವ ಮುನ್ನ ಅವರಿಗೆ ಮುಂಡಾಜೆಯಲ್ಲಿ ಎರಡು ಮನೆಗಳು ಇರಲಿಲ್ಲ. ನಾನು ಮದುವೆಯಾದ ನಂತರ ಎದುರುದಾರರ ತಾಯಿಯೊಂದಿಗೆ ಇರಲು ಒಪ್ಪದ ಕಾರಣ ಎದುರುದಾರರ ಅವರ ತಾಯಿಗೆ ಹೊಸ ಮನೆ ನಿರ್ಮಿಸಿಕೊಡಬೇಕಾಯಿತು ಎಂದರೆ ಸರಿಯಲ್ಲ. ಆ ಮನೆ ಕಟ್ಟಲು ಎದುರುದಾರರು ತುಂಬಾ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರ 2 ನೇ ಮನೆಯನ್ನು 10 ವರ್ಷದ ಹಿಂದೆ ನಿರ್ಮಾಣ ಮಾಡಲಾಗಿದೆ. ಆ ಹೊಸ ಮನೆಯಲ್ಲಿ ಎದುರುದಾರರ ತಾಯಿ ವಾಸವಿದ್ದರು ಎಂದರೆ ಸರಿ.

ನಾನು ಯಾವುದೇ ಕಾರಣ ಇಲ್ಲದೆ ಎದುರುದಾರರೊಂದಿಗೆ ಜಗಳ ಮಾಡಿಕೊಂಡು ದಿ.08.04.2021 ರಂದು ಅವರನ್ನು ಬಿಟ್ಟು ಬಂದಿದ್ದೆ ಎಂದರೆ ಸರಿಯಲ್ಲ. ಹಾಗೇ ಬರುವಾಗ ಎದುರುದಾರರಿಗೆ ವಿಷಯ ತಿಳಿಸಿರಲಿಲ್ಲ. ಆ ಕಾರಣದಿಂದಾಗಿ ದಿ.10.04.2021 ರಂದು ಎದುರುದಾರರು ನನ್ನ ತಾಯಿಯ ಮನೆಗೆ ಬಂದಿದ್ದರು ಎಂದರೆ ಸರಿ. ಆ ಸಮಯಕ್ಕೆ ಎದುರುದಾರರು ನನ್ನನ್ನು ಕರೆದಿದ್ದರೂ ಸಹಾ ನಾನು ಹೋಗಲಿಲ್ಲ ಎಂದರೆ ಸರಿ. ನಂತರ ದಿ.21.04.2021 ರಂದು ಎದುರುದಾರರ ವಕೀಲರ ಮೂಲಕ ನನಗೆ ನೋಟೀಸು ಕಳುಹಿಸಿದ್ದಾರೆ ಎಂದರೆ ಸರಿ. ಆ ನೋಟೀಸಿಗೆ ನಾನು ಉತ್ತರ ಕೊಟ್ಟಿಲ್ಲ. ಆ ನೋಟೀಸು ಬಂದ ಸ್ವಲ್ಪ ದಿನಗಳ ನಂತರ ನಾನು ಎದುರುದಾರರ ಮನೆಗೆ

ಹೋಗಿದ್ದೆ ಎಂದರೆ ಸರಿ. ಆನಂತರ 15-20 ದಿನಗಳ ಕಾಲ ಸರಿಯಾಗಿ ಇದ್ದು ನಂತರ ನನ್ನ ಹಳೇಯ ಅಭ್ಯಾಸವನ್ನು ಶುರುಮಾಡಿದ್ದೆ ಎಂದರೆ ಸರಿಯಲ್ಲ. ನಾನು ಪುನಃ ದಿ.08.07.2021 ರಂದು ಎದುರುದಾರರ ಮನೆಯನ್ನು ಬಿಟ್ಟು ಬಂದಿದ್ದೇನೆ ಎಂದರೆ ಸರಿ. ನಾನು CDPO ಕಚೇರಿಯಲ್ಲಿ ಎದುರುದಾರರೊಂದಿಗೆ ಹೋಗಲು ಒಪ್ಪಿಕೊಂಡು ಅವರೊಂದಿಗೆ ಹೋಗದೇ ಇದ್ದಾಗ ದಿ.31.07.2021 ರಂದು ಎದುರುದಾರರು ಮತ್ತೊಂದು ಅರ್ಜಿಯನ್ನು ಧರ್ಮಸ್ಥಳ ಪೋಲಿಸ್ ಠಾಣೆಯಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿ.

ದಿ.07.08.2021 ರಂದು ಎದುರುದಾರರು ಬೆಳ್ತಂಗಡಿ ಪೋಲಿಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಎರಡು ಅರ್ಜಿಗಳ ಆಧಾರದ ಮೇಲೆ ನಾನು ಪೋಲಿಸ್ ಠಾಣೆ ಮತ್ತು ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿದ್ದೆ ಎಂದರೆ ಸರಿ. ಆ ಎರಡು ಕಡೆ ನನಗೆ ತಿಳಿ ಹೇಳಿದ್ದರೂ ನಾನು ಎದುರುದಾರರೊಂದಿಗೆ ಹೋಗದೇ ಮೂಡಿಗೆರೆ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ಅರ್ಜಿಗಳನ್ನು ಸಲ್ಲಿಸುವ ಮೊದಲೇ ದಿ.30.08.2021 ರಂದು ಎದುರುದಾರರು ಮತ್ತೊಂದು ನೋಟೀಸು ಕಳುಹಿಸಿದ್ದರು ಎಂದರೆ ಸರಿ. ಮೇಲೆ ಹೇಳಿದ ಪ್ರಕರಣಗಳಲ್ಲಿ ರಾಜೀ ಮಾಡಿಕೊಂಡ ನಂತರ ನಾನು ಎದುರುದಾರರ ಮನೆಗೆ ಹೋಗಿ ಅಲ್ಲಿ ಆಗಸ್ಟ್ 2022 ರವರೆಗೆ ಇದ್ದೆ ಎಂದರೆ ಸರಿ. ಆ ಸಮಯದಲ್ಲಿ ಎದುರುದಾರರು ನನ್ನ ನಡವಳಿಕೆಗಳಲ್ಲಿನ ವ್ಯತ್ಯಾಸದ ಬಗ್ಗೆ ನನಗೆ ತಿಳಿ ಹೇಳುವಾಗಲೆಲ್ಲಾ ನಾನು ಅವರೊಂದಿಗೆ ಜಗಳ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಎದುರುದಾರರು ಮನೆಯಲ್ಲಿ ಇಲ್ಲದಾಗ ಮತ್ತು ರಾತ್ರಿ ಸಮಯದಲ್ಲಿ ನಾನು ಬೇರೆಯವರೊಂದಿಗೆ ಮೊಬೈಲ್ ಮೂಲಕ ಮೆಸೇಜ್ ಮತ್ತು ಕಾಲ್ ಗಳು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರದ ಬಗ್ಗೆಯೂ ಸಹಾ ಎದುರುದಾರರು ತಿಳಿ ಹೇಳಿದಾಗ ನಾನು ಅವರ ಮೇಲೆ ಸಿಟ್ಟು ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ಆದಾಯದ ಸಂಬಂಧ ಸಲ್ಲಿಸಿರುವ ಪ್ರಮಾಣಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೆ. ಆ ಪ್ರಮಾಣಪತ್ರದಲ್ಲಿ ಯಾವುದೇ ಸುಳ್ಳು ವಿಚಾರಗಳನ್ನು ಬರೆಸಿಲ್ಲ. ಈ ಹಿಂದೆ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದ ಎರಡು ಪ್ರಕರಣಗಳ ಬಗ್ಗೆ ಸದರಿ ಪ್ರಮಾಣಪತ್ರದಲ್ಲಿ ದುರುದ್ದೇಶ ಪೂರ್ವಕವಾಗಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ನಾನು ಒಡವೆಗಳನ್ನು ಇಟ್ಟು ಒಟ್ಟು ರೂ.4 ಲಕ್ಷ ಸಾಲ ಪಡೆದಿದ್ದೇನೆ. ಆ ರೀತಿ ಮೊದಲ ಬಾರಿಗೆ ಸಾಲ ಪಡೆದ ದಿನಾಂಕ ಹೇಳಲು ಆಗುವುದಿಲ್ಲ. ನಿಮಗೆ ಇರುವ ಸಾಲದ ಸಂಬಂಧದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೀರ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಳೆದ 8 ತಿಂಗಳ ಹಿಂದಿನ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆಗಸ್ಟ್ 2022 ರ 5-6 ತಿಂಗಳ ನಂತರ ನಾನು ಸಾಲ ಪಡೆದಿದ್ದೇನೆ. ನಾನು ಈ ಪ್ರಕರಣದಲ್ಲಿ ಸುಳ್ಳು ಸಾಧನೆ ಮಾಡುವ ಉದ್ದೇಶದಿಂದ ನನ್ನ ಬಳಿ ಇರುವ ಚಿನ್ನದ ಒಡವೆಗಳ ಪೈಕಿ ಒಂದೆರಡು ಒಡವೆಗಳನ್ನು ಮಾತ್ರ ಇಟ್ಟು ಸಣ್ಣ ಮೊತ್ತದ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ರೂ.4 ಲಕ್ಷ ಸಾಲ ಪಡೆಯುವ ಯಾವ ಉದ್ದೇಶ ಅಥವಾ ಅವಶ್ಯಕತೆ ನನಗೆ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಎದುರುದಾರರು ಹಾಗೂ ಅವರ ತಾಯಿಯೊಂದಿಗೆ ಎಂದಿಗೂ ಸಹಾ ಸೌಹಾರ್ದತೆಯಿಂದ ಜೀವನ ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರೊಂದಿಗೆ ಇದ್ದ

ಸಮಯದಲ್ಲಿ ಅವರ ಹಾಗೂ ಅವರ ತಾಯಿಯೊಂದಿಗೆ ಪ್ರತೀದಿನ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಈ ರೀತಿ ಮಾಡಿರುವ ಕಾರಣ ಎದುರುದಾರರಿಗೆ ಮಾನಸಿಕ ಹಿಂಸೆ ಮತ್ತು ಸಮಾಜದಲ್ಲಿ ಅವರ ಗೌರವಕ್ಕೆ ಕುಂದುಂಟಾಗಿದೆ ಎಂದರೆ ಸರಿಯಲ್ಲ. ಎದುರುದಾರರು ಎರಡು ಬಾರಿ ಕಳುಹಿಸಿರುವ ನೋಟೀಸುಗಳಲ್ಲಿನ ವಿಚಾರ ಸತ್ಯ ಇದ್ದ ಕಾರಣ ಅದಕ್ಕೆ ನೀವು ಉತ್ತರ ಕೊಟ್ಟಿಲ್ಲ ಎಂದರೆ ಸಾಕ್ಷಿಯು ವಾಪಸ್ಸು ಹೋಗಿದ್ದೆ ಎಂದು ನುಡಿಯುತ್ತಾರೆ. ನೋಟೀಸುಗಳಿಗೆ ಉತ್ತರ ಕೊಡಬೇಕಾಗುತ್ತದೆ ಹಾಗೂ ಉತ್ತರ ಕೊಡಲಾಗುವುದಿಲ್ಲ ಎನ್ನುವ ಕಾರಕ್ಕಾಗಿ ನನಗೆ ಇಷ್ಟ ಇಲ್ಲದೇ ಇದ್ದರೂ ಎದುರುದಾರರ ಮನೆಗೆ ವಾಪಸ್ಸು ಹೋಗಿದ್ದೆ ಎಂದರೆ ಸರಿಯಲ್ಲ. ಆ ರೀತಿ ವಾಪಸ್ಸು ಹೋದಾಗಲೂ ಸಹಾ ಎದುರುದಾರರೊಂದಿಗೆ ಒಳ್ಳೆಯ ರೀತಿ ಕೌಟುಂಬಿಕ ಜೀವನ ನಡೆಸಿಲ್ಲ ಎಂದರೆ ಸರಿಯಲ್ಲ. ಎದುರುದಾರರೊಂದಿಗೆ ಇದ್ದರೆ ನನಗೆ ಇಷ್ಟ ಬಂದ ಹಾಗೇ ಇರಲು ಆಗುವುದಿಲ್ಲ ಹಾಗೂ ನನ್ನ ಇಷ್ಟದಂತೆ ಹಣ ಖರ್ಚು ಮಾಡಲಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ಎದುರುರಾರರಿಗೆ ತಿಳಿಸದೇ ಅವರ ಮನೆಯಿಂದ ಬಂದಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರು ನನ್ನ ವಿರುದ್ಧ ಪೋಲಿಸರಿಗೆ ಹಾಗೂ ಇತರೆ ಅಧಿಕಾರಿಗಳಿಗೆ ದೂರು ಕೊಟ್ಟ ಕಾರಣ ನನ್ನ ತಪ್ಪುಗಳನ್ನು ಮುಚ್ಚಿಹಾಕಿಕೊಳ್ಳಲು ಅವರ ವಿರುದ್ಧ ನ್ಯಾಯಾಲಯದಲ್ಲಿ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರೊಂದಿಗೆ ಇದ್ದಾಗ ಅವರಿಗೆ ಒತ್ತಡ ಹೇರಿ ಸಾಲ ಮಾಡಿಸಿ ಬಹಳಷ್ಟು ಚಿನ್ನಾಭರಣಗಳನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೂ ಹಾಗೂ ನನ್ನ ಮಕ್ಕಳಿಗೂ ಬೆಳ್ತಂಗಡಿಯ ಪೃಥ್ವಿ ಜುವೆಲರ್ಸ್, ಶೃಂಗಾರ್ ಜುವೆಲರ್ಸ್, ಆಭರಣ ಜುವೆಲರ್ಸ್ ಮತ್ತು ಉಜಿರೆಯ ಧನಲಕ್ಷ್ಮೀ ಜುವೆಲರ್ಸ್ ಮತ್ತು ಇತರೆ ಕಡೆ ಚಿನ್ನಾಭರಣಗಳನ್ನು ಖರೀದಿ ಮಾಡಿ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಎದುರುದಾರರು ಸ್ವತಃ ತಮಗೆ ಚಿನ್ನಾಭರಣಗಳನ್ನು ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಎದುರುದಾರರು ಚಿನ್ನದ ಬಳೆಗಳನ್ನು ಹಾಕಿಕೊಳ್ಳುತ್ತಿದ್ದರು. ಚಿನ್ನಾಭರಣಗಳನ್ನು ನನಗೂ ಮತ್ತು ಎದುರುದಾರರಿಗೆಂದು ಮಾಡಿಸಿಕೊಟ್ಟಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಎಂದಿಗೂ ಸಹಾ ನನ್ನ ಮೇಲೆ ಯಾವುದೇ ರೀತಿಯ ಕೌಟುಂಬಿಕ ದೌರ್ಜನ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಬಹಳಷ್ಟು ಕಿರುಕುಳ ಮತ್ತು ಮಾನಸಿಕ ಹಿಂಸೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಾನೇ ಸ್ವತಃ ಸಕಾರಣಗಳು ಇಲ್ಲದೆ ಎದುರುದಾರರನ್ನು ಬಿಟ್ಟು ಬಂದಿರುವ ಕಾರಣ ಹಾಗೂ ನನಗೆ ಈಗ ಎದುರುರಾರಿಗಿಂತಲೂ ಹೆಚ್ಚು ಆದಾಯ ಇರುವ ಕಾರಣ ನನಗೆ ಎದುರುದಾರರಿಂದ ಜೀವನಾಂಶ ಪಡೆಯುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಎದುರುದಾರರಿಗೆ ತಿಂಗಳಿಗೆ ರೂ.1 ಲಕ್ಷ ಆದಾಯ ಇಲ್ಲ ಎಂದರೆ ಸರಿಯಲ್ಲ. ಎದುರುದಾರರ ತಿಂಗಳ ಆದಾಯ ಸುಮಾರು ರೂ.30,000/- ಎಂದರೆ ಸರಿಯಲ್ಲ. ನಾನು ಎದುರುದಾರರಿಂದ ಹೆಚ್ಚು ಹಣ ಪಡೆಯುವ ಉದ್ದೇಶದಿಂದ ಎದುರುದಾರರಿಗೆ ಹೆಚ್ಚು ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿ ನನ್ನ ಆದಾಯವನ್ನು ದುರುದ್ದೇಶಪೂರ್ವಕವಾಗಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಾರಣದಿಂದಲೇ ನನ್ನ ಹಾಗೂ ಎದುರುದಾರರ ಕೌಟುಂಬಿಕ ಜೀವನದಲ್ಲಿ

ತೊಂದರೆಯಾಗಿದೆ ಎಂದರೆ ಸರಿಯಲ್ಲ. ನನಗೆ ಎದುರುದಾರರೊಂದಿಗೆ ಸಂಸಾರ ಮಾಡಲು ಯಾವುದೇ ಉದ್ದೇಶ ಇಲ್ಲ ಹಾಗೂ ಅವರಿಂದ ಕೇವಲ ಆರ್ಥಿಕ ದುರ್ಲಾಬ ಹೊಂದುವ ದುರುದ್ದೇಶ ಹೊಂದಿದ್ದೇನೆ ಎಂದರೆ ಸರಿಯಲ್ಲ. ಆ ದುರುದ್ದೇಶದಿಂದಲೇ ಎದುರುದಾರರ ವಿರುದ್ಧ ಸುಳ್ಳು ಪ್ರತಿಪಾಧನೆ ಮಾಡಿ ಸುಳ್ಳು ಅರ್ಜಿಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾಧಿಂ.,
ಮೂಡಿಗೆರೆ.